# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ-29, ವಿಜಯನಗರ 2ನೇ
ಹಂತ, ಹಿನಕಲ್, ಮೈಸೂರು-
5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seeommys@gmail.com


ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ಆ.30 ದಿನಾಂಕ: 02.06.2017

## ಸಭೆಯ ನಡಾವಳಿಗಳು

ದಿನಾಂಕ 16/05/2017 ರಂದು ಮಡಿಕೇರಿ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ರಾಮ ಚಂದ್ರ :ಅಧೀಕ್ಷಕ ಇಂಜಿನಿಯರ್, ಚಾಮರಾಜನಗರ-ಕೊಡಗು ವೃತ್ತ
2. ಶ್ರೀಮತಿ ತಾರಾ :ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ,
3. ಶ್ರೀ ಬಿ ಸೋಮಶೇಖರ್ :ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ಮಡಿಕೇರಿ ವಿಭಾಗ
4. ಶ್ರೀ ಪಿ ಎನ್ ದೇವಯ್ಯ :ಸಕಾಇಂ(ವಿ), ಕಾ ಮತ್ತು ಪಾ ಮಡಿಕೇರಿ ವಿಭಾಗ
5. ಶ್ರೀ ದೊಡ್ಡಮನಿ :ಸಕಾಇಂ(ವಿ),ಕಾ ಮತ್ತು ಪಾ ಮಡಿಕೇರಿ ಉಪವಿಭಾಗ
6. ಶ್ರೀ ನಾಗರಾಜು ವಿ ಎಂ :ಲೆಕ್ಕಾಧಿಕಾರಿ, ಮಡಿಕೇರಿ ವಿಭಾಗ
7. ಶ್ರೀ ದಿನೇಶ್ ಎ ಎ :ಲೆಕ್ಕಾಧಿಕಾರಿ, ಆಂತರಿಕ ಪರಿಶೋಧಕರು, ಮಡಿಕೇರಿ ವಿಭಾಗ
8. ಕು. ವಿನುತಾ ಈ :ಸಇಂ(ವಿ), ಕಾ ಮತ್ತು ಪಾ ಉಪವಿಭಾಗ, ಮಡಿಕೇರಿ
9. ಶ್ರೀ. ಸಂಪತ್ ಎ.ಆರ್ :ಸಇಂ(ವಿ), ಕಾ ಮತ್ತು ಪಾ ಘಟಕ-1, ಮಡಿಕೇರಿ
10. ಶ್ರೀ. ಸುಬ್ರಮಣ್ಯ :ಕಿಇಂ(ವಿ), ಕಾ ಮತ್ತು ಪಾ ಘಟಕ, ತಾಳತ್ತಮನೆ ಶಾಖೆ
11. ಶ್ರೀಮತಿ ಹರಿಣಾಕ್ಷಿ ಬಿ.ಎ. :ಕಿಇಂ(ವಿ), ಕಾ ಮತ್ತು ಪಾ ಘಟಕ, ಭಾಗಮಂಡಲ ಶಾಖೆ
12. ಶ್ರೀ. ಅನಿಲ್ ಕೆ.ಜಿ :ಪ್ರ, ಕಿಇಂ(ವಿ), ಕಾ ಮತ್ತು ಪಾ ಘಟಕ, ಸಂಪಾಜೆ ಶಾಖೆ
13. ಶ್ರೀ. ಚೇತನ್ ಕುಮಾರ್ :ಪ್ರ, ಕಿಇಂ(ವಿ), ಕಾ ಮತ್ತು ಪಾ ಘಟಕ, ಮೂರ್ನಾಡು ಶಾಖೆ
14. ಶ್ರೀಮತಿ ವಿಮಲ ಪಿ.ಬಿ :ಪ್ರ, ಕಿಇಂ(ವಿ), ಕಾ ಮತ್ತು ಪಾ ಘಟಕ, ನಾಪೋಕ್ಲು ಶಾಖೆ
15. ಶ್ರೀಮತಿ ರತ್ನಮಂಜರಿ :ಹಿರಿಯ ಸಹಾಯಕರು, ಕಾ ಮತ್ತು ಪಾ ಉಪವಿಭಾಗ, ಮಡಿಕೇರಿ
16. ಶ್ರೀಮತಿ ಭವಿನಾ ಎ.ಕೆ :ಪ್ರ. ಹಿರಿಯ ಸಹಾಯಕರು, ಕಾ ಮತ್ತು ಪಾ ಶಾಖೆ, ಮೂರ್ನಾಡು

ಸಭೆಯಲ್ಲಿ ಮಡಿಕೇರಿ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1 | ಕುಡಿಯರ ಮುತ್ತಪ್ಪ, ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷರು, ಕುಡಿಯರ ಕಾಲೋನಿ | *ಯವಕಪಾಡಿಯ ಗಿರಿಜನ ಕಾಲೋನಿಯ 3 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮನವಿ ಮಾಡಿದರು. *ಪ್ರತಿ ತಿಂಗಳು ವಿದ್ಯುತ್ ಬಿಲ್ ನೀಡುತ್ತಿಲ್ಲವೆಂದು ಹಾಗೂ ಒಂದೇ ಬಾರಿಗೆ ವಿದ್ಯುತ್ ಬಿಲ್ ನೀಡಿದಲ್ಲಿ ಬಡಜನರಿಗೆ ಹೊರೆಯಾಗುವುದಾಗಿ ತಿಳಿಸಿದರು. *ಮರಂದೋಡು, ಅಡಿಯರ ಕಾಲೋನಿ ಹಾಗೂ ಕುಡಿಯರ ಕಾಲೋನಿಗಳು ಈ ದಿನದ ವರೆಗೂ ವಿದ್ಯುತ್ ಸಂಪರ್ಕ ವಂಚಿತವಾಗಿದ್ದು, ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮನವಿ ಮಾಡಿದರು. | * ಪರಿಶೀಲಿಸಿ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಅಧೀಕ್ಷಕ ಇಂಜಿನಿಯರ್(ವಿ) ಅವರು ಸಕಾಇಂ(ವಿ) ಅವರಿಗೆ ತಿಳಿಸಿದರು. * ಪ್ರತಿ ತಿಂಗಳು ವಿದ್ಯುತ್ ಬಿಲ್ ನೀಡಲುಕ್ರಮ ತೆಗೆದುಕೊಳ್ಳಲು ಕಿರಿಯ ಇಂಜಿನಿಯರ್ (ವಿ) ರವರು ಸಂಬಂಧಪಟ್ಟ ಅಧಿಕಾರಿಗೆ ನಿರ್ದೇಶನ ನೀಡಲಾಯಿತು. * ಮರಂದೋಡು, ಅಡಿಯರ ಕಾಲೋನಿ ಹಾಗೂ ಕುಡಿಯರ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ |

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| | | | ಕಲ್ಪಿಸಲು ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸವುದಾಗಿ ತಿಳಿಸಿದರು. |
| 2 | ಕೆ ಬಿ ದೇವಕಿ, ಯವಕಪಾಡಿ<br>ಭೀಮಯ್ಯ ಸುಮಿತ್ರ, ಯವಕಪಾಡಿ<br>ಕುಡಿಯರ ಮುತ್ತಪ್ಪ, ಯವಕಪಾಡಿ | *ಯವಕಪಾಡಿ ಹಾಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮನವಿ ಮಾಡಿದರು. | * ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳು ವುದಾಗಿ ಅಧೀಕ್ಷಕ ಇಂಜಿನಿಯರ್ (ವಿ) ಅವರು ತಿಳಿಸಿದರು. |
| 3 | ಕುಂಞ ರಾಮ, ಅಡಿಯರ ಕಾಲೋನಿ | * ಅಡಿಯರ ಕಾಲೋನಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮನವಿ ಮಾಡಿದರು. | * ಅಡಿಯರ ಕಾಲೋನಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸವುದಾಗಿ ತಿಳಿಸಿದರು |
| 4 | ಧರ್ಮಪಾಲ, ಚೇರಂಬಾಣೆ<br>ಆರ್. ಆರ್. ಸಂಖ್ಯೆ: ಒಎಕಿಐ22374 | *ಮಾಪಕ ಓದುವಿಕೆಯ ನ್ಯೂನತೆಗಳ ಬಗ್ಗೆ ದೂರಿದರು,<br>* ಮಾಪಕ ಓದುಗರು ಅನಗತ್ಯವಾಗಿ ಅಸಹಜ ರೀಡಿಂಗ್ ಕೊಡುತ್ತಿದ್ದು ಗ್ರಾಹಕರಿಗೆ ಅನಗತ್ಯ ಹೊರೆಯಾಗು ತ್ತಿರುವುದಾಗಿ ತಿಳಿಸಿದರು. ಹಾಗೂ ಕೆಲವು ಗ್ರಾಹಕರು ಬಿಲ್ಲುಗಳನ್ನು ಅಧೀಕ್ಷಕ ಇಂಜಿನಿಯರ್ (ವಿ) ಅವರಿಗೆ ತೋರಿಸಿದರು. | *ಮಾಪಕ ಓದುವಿಕೆಯ ನ್ಯೂನತೆ ಗಳನ್ನು ಪರಿಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಕಾಇಂ(ವಿ) ರವರಿಗೆ ನಿರ್ದೇಶನ ನೀಡಲಾಯಿತು. |
| 4 | ಪಿ.ಎಸ್. ಸುಬ್ಬಯ್ಯ, ಚೇರಂಬಾಣೆ | * ನಿಗದಿತ ದಿನಾಂಕದಂದು ವಿದ್ಯುತ್ ಬಿಲ್ ನೀಡುತ್ತಿಲ್ಲವಾದ್ದರಿಂದ ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | * ವಿದ್ಯುತ್ ಬಿಲ್ ಸಮಸ್ಯೆಯನ್ನು ಪರಿಹರಿಸಲು ಕ್ರಮ ತೆಗೆದುಕೊ ಳ್ಳುವುದಾಗಿ ಹಿರಿಯ ಸಹಾಯಕರಿಗೆ ತಿಳಿಸಿದರು. |
| 6 | ಶ್ರೀ. ಪ್ರಕಾಶ್, ಎಫ್.ಎಮ್.ಸಿ ಕಾಲೇಜು ಹತ್ತಿರ, ಆರ್.ಆರ್ ಸಂಖ್ಯೆ: 26443, 26444 | * ವಿದ್ಯುತ್ ಬಿಲ್ ಸರಿಯಾದ ಸಮಯಕ್ಕೆ ನೀಡುವುದಿಲ್ಲವೆಂದು ತಿಳಿಸಿದರು<br>* ವಿದ್ಯುತ್ ಬಿಲ್ಲನ್ನು ಸರಿಯಾದ ಸ್ಥಳದಲ್ಲಿ ಇಡದೇ, ಮನಸೋ ಇಚ್ಚೆ ಎಲ್ಲಿಯಾದರಲ್ಲಿ ಮಾಪಕ ಓದುಗರು ಇಡುತ್ತಿರುವುದರಿಂದ ಗ್ರಾಹಕರಿಗೆ ವಿದ್ಯುತ್ ಬಿಲ್ ದೊರಕುತ್ತಿಲ್ಲವೆಂದು ದೂರಿದರು.<br>*ಎ.ಟಿ.ಪಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕರು / ಆಪರೇಟರ್ ಗಳು ಸರಿಯಾಗಿ ಆರ್. ಆರ್.ಸಂಖ್ಯೆಗಳನ್ನು ನಮೂದಿಸುತ್ತಿಲ್ಲ ವೆಂದೂ ಇದರಿಂದಾಗಿ ಗ್ರಾಹಕರಿಗೆ ಅದನ್ನು ಸರಿದೂಗಿಸಲು ಸಮಯ ವ್ಯರ್ಥವಾಗುತ್ತಿರುವುದಾಗಿ ದೂರಿದರು. | * ವಿದ್ಯುತ್ ಬಿಲ್ ಸಮಸ್ಯೆಯನ್ನು ಬಗೆಹರಿಸಲು ಕ್ರಮತೆಗೆದುಕೊಳ್ಳು ವುದಾಗಿ ಅಧೀಕ್ಷಕ ಇಂಜಿನಿಯರ್ (ವಿ) ಅವರು ತಿಳಿಸಿದರು.<br>* ನಗರ ಪ್ರದೇಶದ ಗ್ರಾಹಕರು ಆನ್ ಲೈನ್ ಮೂಲಕ ವಿದ್ಯುತ್ ಬಿಲ್ ಪಾವತಿ ಮಾಡಬಹುದಾಗಿದ್ದು, ಆನ್ ಲೈನ್ ಅಲ್ಲಿ ವಿದ್ಯುತ್ ಬಿಲ್ ಪಾವತಿಸುವಂತೆ ಮನವಿ ಮಾಡಿದ ರು. ಇದರಿಂದಾಗಿ ಗ್ರಾಹಕರ ಸಮ ಯ ಉಳಿಯುವುದಾಗಿ ತಿಳಿಸಿದರು.<br>* ಎ.ಟಿ.ಪಿ ಅಪರೇಟರ್ ಗಳಿಗೆ ಸರಿಯಾಗಿ ಆರ್.ಆರ್. ಸಂಖ್ಯೆ ಗಳನ್ನು ನಮೂದಿಸಲು ತಿಳಿಹೇಳು ವಂತೆ ಸಕಾಇಂ(ವಿ) ಅವರಿಗೆ ಅಧೀ ಕ್ಷಕ ಇಂಜಿನಿಯರ್ (ವಿ) ಅವರು ತಿಳಿಸಿದರು. |
| 7 | ಪಿ.ಹೆಚ್. ಚಂಗಪ್ಪ, ಚೇರಂಬಾಣೆ ಗ್ರಾಮ, ಆರ್.ಆರ್. ಸಂಖ್ಯೆ: 79 | * ಎಲ್.ಇ.ಡಿ ಬಲ್ಬ್ ಗಳು ದೊರಕುತ್ತಿಲ್ಲವೆಂದು ದೂರಿದರು<br>* ತೋಟದಲ್ಲಿರುವ ವಿದ್ಯುತ್ ಕಂಬಗಳನ್ನು ರಸ್ತೆ ಬದಿಗೆ ಸ್ಥಳಾಂತರಿ ಸಲು ಹಲವಾರು ಬಾರಿ ದೂರು ನೀಡಿದ್ದು, ಇದುವರೆವಿಗೂ ಸ್ಥಳಾಂತರ ಗೊಳಿಸಿಲ್ಲವೆಂದು ದೂರಿದರು. | * ಶೀಘ್ರವಾಗಿ ಎಲ್.ಇ.ಡಿ. ಬಲ್ಬ್ ಗಳನ್ನು ದೊರಕಿಸಿಕೊಡುವುದಾಗಿ ತಿಳಿಸಿದರು.<br>* ಕಿರಿಯ ಇಂಜಿನಿಯರ್(ವಿ), ಭಾಗಮಂಡಲ ಶಾಖೆ ಅವರಿಗೆ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನು ಸಾರ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು. |
| 8 | ಬಿ.ಎಮ್ ಬಾಲಕೃಷ್ಣ, ಕೊಟ್ಟೂರು | * ಹಲವಾರು ತಿಂಗಳುಗಳಿಂದ ತಮ್ಮ ಗ್ರಾಮಕ್ಕೆ ವಿದ್ಯುತ್ ಬಿಲ್ ಸರಿಯಾಗಿ ನೀಡುತ್ತಿಲ್ಲವೆಂದು ತಿಳಿಸಿದರು. | * ಮಾಪಕ ಓದುವಿಕೆಯನ್ನು ಸರಿಪಡಿಸಲು ಕ್ರಮ ತೆಗದುಕೊಳ್ಳು ವುದಾಗಿ ತಿಳಿಸಿದರು. |

| ಕ್ರಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 9 | ಕುಶಾಲಪ್ಪ, ಮಕ್ಕಂದೂರು ಗ್ರಾಮ, ಮಡಿಕೇರಿ | * ವಿದ್ಯುತ್ ಪರಿವರ್ತಕದಿಂದ ನ್ಯೂಟ್ರಲ್ ಮತ್ತು ಅರ್ಥ್ ನಡುವೆ 30 ವೋಲ್ಟ್ ನಿಂದ 70 ವೋಲ್ಟ್ ಬರುತ್ತಿದ್ದು ಸರಿದೂಗಿಸಬೇಕೆಂದುಕೇಳಿ ಕೊಂಡರು. | * ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಸಹಾಯಕ ಇಂಜಿನಿಯರ್(ವಿ), ಅವರಿಗೆ, ಅಧೀಕ್ಷಕ ಇಂಜಿನಿಯರ್ (ವಿ) ಅವರು ತಿಳಿಸಿದರು. |
| 10 | ಮಂದಪ್ಪ, ಬೇಂಗೂರು ಗ್ರಾಮ, ಮಡಿಕೇರಿ | * ತೋಟದಲ್ಲಿರುವ ವಿದ್ಯುತ್ ಕಂಬ ಬಾಗಿರುವ ಬಗ್ಗೆ ದೂರು ನೀಡಿದರು. | * ಸ್ಥಳ ಪರಿಶೀಲಿಸಿ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ಅವರು ಕಿರಿಯ ಇಚಿಜಿನಿಯರ್(ವಿ), ಭಾಗಮಂಡಲ ಶಾಖೆ ಅವರಿಗೆ ತಿಳಿಸಿದರು. |
| 11 | ಮೊಣ್ಣಪ್ಪ ಕಟ್ಟೆಮಾಡು, ಪಳಂಗಪ್ಪ ಕಟ್ಟಮಾಡು, ರಾಮಚ್ಚ ಕಟ್ಟೆಮಾಡು, ಜೀವನ್ ಕಟ್ಟೆಮಾಡು, ಜಂಸಿ ಕಟ್ಟೆಮಾಡು, ಚೆಣ್ಣಪ್ಪ ಕಟ್ಟೆಮಾಡು, ಕಟ್ಟೆಮಾಡು ಗ್ರಾಮ, ಮಡಿಕೇರಿ ತಾಲ್ಲೂಕು | * ತೋಟದಲ್ಲಿರುವ ಎಲ್.ಟಿ. ವಿದ್ಯುತ್ ಮಾರ್ಗವನ್ನು ರಸ್ತೆ ಬದಿಗೆ ಸ್ಥಳಾಂತರಿಸುವಂತೆ ಮನವಿ ಮಾಡಿದರು. | * ಸ್ಥಳ ಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ಅವರು ಕಿರಿಯ ಇಂಜಿನಿಯರ್(ವಿ), ಮೂರ್ನಾಡು ಶಾಖೆ ಅವರಿಗೆ ತಿಳಿಸಿದರು. |
| 12 | ಎಮ್.ಜೆ. ಶೇಖ್, ಭಗವತಿ ನಗರ, ಮಡಿಕೇರಿ ನಗರ | * ಅಬ್ಬಿಫಾಲ್ಸ್ ರಸ್ತೆಯಲ್ಲಿ ಹಳೆಯ ವಿದ್ಯುತ್ ಕಂಬಗಳು ರಸ್ತೆ ಮಧ್ಯದಲ್ಲಿದ್ದು ವಿದ್ಯುತ್ ತಂತಿಯನ್ನು ರಸ್ತೆ ಬದಿಯಲ್ಲಿ ಹೊಸ ಕಂಬಗಳನ್ನು ಹಾಕಿ ಸ್ಥಳಾಂತರಿಸಲಾಗಿದೆ, ಆದರೆ ಹಳೆಯ ವಿದ್ಯುತ್ ಕಂಬಗಳನ್ನು ಹಾಗೆಯೇ ಬಿಡಲಾಗಿದೆ, ಹಳೆಯ ವಿದ್ಯುತ್ ಕಂಬಗಳನ್ನು ತೆಗೆಯಬೇಕೆಂದು ಮನವಿ ಮಾಡಿದರು<br>* ತಮ್ಮ ಮನೆಯ ಮುಂಭಾಗದಲ್ಲಿ ಹಳೆಯ ವಿದ್ಯುತ್ ಕಂಬವಿದ್ದು ಅದನ್ನು ತೆರವುಗೊಳಿಸಬೇಕೆಂದು ತಿಳಿಸಿದರು. | * ಕೂಡಲೇ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಕ್ರಮ ತೆಗೆದು ಕೊಳ್ಳಬೇಕೆಂದು ಅಧೀಕ್ಷಕ ಇಂಜಿನಿಯರ್(ವಿ) ಅವರು ಸಹಾಯಕ ಇಂಜಿನಿಯರ್(ವಿ), ಮಡಿಕೇರಿ ಶಾಖೆ ಅವರಿಗೆ ತಿಳಿಸಿದರು.<br><br>* ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಧೀಕ್ಷಕ ಇಂಜಿನಿಯರ್(ವಿ) ಅವರು ಸಹಾಯಕ ಇಂಜಿನಿಯರ್(ವಿ), ಮ ಡಿಕೇರಿ ಶಾಖೆ ಅವರಿಗೆ ತಿಳಿಸಿದರು. |
| 13 | ಭೋಪಣ್ಣ, ಬೆಟ್ಟಗೇರಿ ಗ್ರಾಮ, ಮಡಿಕೇರಿ | * ಬೆಟ್ಟಗೇರಿ ಪ್ರದೇಶದಲ್ಲಿ ವಿದ್ಯುತ್ ತಂತಿ ಜೋತು ಬಿದ್ದಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸಿರುವುದಿಲ್ಲ. ಇದರಿಂದಾಗಿ ಪ್ರತಿ ಮಳೆಗಾಲದಲ್ಲಿ ವಿದ್ಯುತ್ ತಂತಿ ತುಂಡಾಗಿ/ ಕಂಬಗಳು ಮುರಿದು ವಿದ್ಯುತ್ ವ್ಯತ್ಯಯ ಉಂಟಾಗುತ್ತಿರುತ್ತದೆ. ಅದನ್ನು ಸರಿಪಡಿಸಬೇಕೆಂದು ತಿಳಿಸಿದರು. | * ಕೂಡಲೇ ಸ್ಥಳಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧೀಕ್ಷಕ ಇಂಜಿನಿಯರ್(ವಿ) ಅವರು ಕಿರಿಯ ಇಂಜಿನಿಯರ್(ವಿ), ತಾಳತ್ತಮನೆ ಶಾಖೆ ಅವರಿಗೆ ತಿಳಿಸಿದರು. |

ತಮ್ಮ ವಿಶ್ವಾಸಿ,

8/6/17

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಮಡಿಕೇರಿ ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.